[Mr. DEPUTY SPEAKER in the Chair]

Notice of Adjournment motion *re* : the Implementation of the Mahajan Commission Report

ಶ್ರೀ ಬಿ. ಪಿ ಗಂಗಾಧರ್ (ತುಮಕೂರು). - ಗಡಿ ಸಮಸ್ಯೆ ಬಹಳ ಮುಖ್ಯವಾದ ವಿಚಾರ ವಾಗಿರುವುದರಿಂದ ಅದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದೆ, ಇದು ದೇಶದ ಪ್ರಶ್ನೆ. ಸರ ಕಾರ ಇದರ ಬಗ್ಗೆ ಏನೂ ಯೋಚನೆ ಮಾಡುತ್ತಿಲ್ಲ. ಹಿಂದಿನ ಅಧಿವೇಶನವಾದ ಮೇಲೆ ಇದುವರೆಗೂ ಏನು ನಡೆದಿದೆ, ಕೇಂದ್ರ ಸರ್ಕಾರದಿಂದ ಏನು ಕಮ್ಯೂನಿಕೇಷನ್ ಬಂದಿದೆ, ಅ ರು ಏನು ತಿಳಿಸಿ ದ್ದಾರೆ, ಅವರ ನಿಲುವು ಏನು, ನಮ್ಮ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಬೇಕು. ಕೇಂದ್ರ ಸರ್ಕಾರದವರು ಆಲ್ಟರ್ನೇಟಿವ್ ಸಜೆಷನ್ಸ್ ಮಾಡಿದ್ದಾರೆಂದು ಗೊತ್ತಾಗಿದೆ. ಅವರು ಏನು ಹೇಳಿದ್ದಾರೆ, ಅದರ ಮೇಲೆ ನಮ್ಮ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನೆಲ್ಲ ಸಭೆಯ ಮುಂದೆ ಇಡಬೇಕಾದ ಕರ್ತವ್ಯ ಸರ್ಕಾರದ್ದಾಗಿತ್ತು. ಅವರ ಕರ್ತವ್ಯ ಲೋಪ ಮಾಡಿದ್ದಾರೆಂದು ನನಗನ್ನಿಸುತ್ತದೆ. ಅವರು ಮರೆ ಮಾಚಿದರೂ ನಾವು ಸುಮ್ಮನೆ ಇರುವೆ ಹಾಗಿಲ್ಲ. ಇದು ಬಹಳ ಮುಖ್ಯವಾದ ವಿಚಾರ, ಇದನ್ನು ತೆಗೆದುಕೊಳ್ಳಲೇಬೇಕು.

†ಶ್ರೀ ಪಾಟೀಲ್ ನಾಗರಾಜ್ (ಚಿಕ್ಕಪೇಟೆ).—ನಾನು ಮತ್ತು ಶ್ರೀ ವೀರಣ್ಣ ನಾಗಪ್ಪನವರೂ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಎರಡು ದಿವಸವಾಯಿತು. ಗಡಿ ವಿವಾದದ ಬಗ್ಗೆ ಮಹಾರಾಷ್ಟ್ರ ಸರ್ಕಾರದ ಒತ್ತಾಯದ ಮೇಲೆ ಮುಂದಿನ ತಿಂಗಳು 13ನೇ ತಾರೀಖಿನೊಳಗಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರೊಂದಿಗೆ ಕುಳಿತು ಮಾತನಾಡಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಕೇಂದ್ರ ಸರ್ಕಾರದವರು ಮಹಾಜನ್ ವರದಿಯ ಶಿಫಾರಸುಗಳನ್ನು ಕೈಬಿಟ್ಟು ಹೊಸ ಸೂತ್ರ ಕಂಡು ಹಿಡಿಯುವುದಕ್ಕೆ ಹೊರಟಿದ್ದಾರೆ. ಮೈಸೂರು ಸರ್ಕಾರ, ಮೈಸೂರು ಮುಖ್ಯಮಂತ್ರಿ ಮಂಡಲ ಇದರ ಬಗ್ಗೆ ನಿರ್ಧಾರ ಮಾಡುತ್ತಿದೆ ನಮ್ಮ ನಿಲುವು ಏನು ಎಂದು 13ನೇ ತಾರೀಖಿನೊಳಗಾಗಿ ತಿಳಿಸಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕು. ಇಲ್ಲದೆ ಇದ್ದರೆ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುವ ಪ್ರಸಂಗವಿದೆ. ಮಹಾಜನ್ ವರದಿಯನ್ನು ಬಿಟ್ಟು ಬೇರೆ ಯಾವುದೇ ವಿಧವಾದ ಸೂತ್ರವನ್ನು ರೂಪಿಸುವುದಕ್ಕೆ ನಾವು ಎಡೆ ಕೊಟ್ಟರೆ ಮಹಾಜನ್ ವರದಿ ಮೂಲೆಗುಂಪಾಗುತ್ತದೆ. ನಾವು ಬೆಳಗಾವಿಯನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಮೈಸೂರು ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ ಬಂದು ಭಾಷಣ ಮಾಡುತ್ತಾರೆ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಬಹಳ ಅನ್ಯಾಯವಾಗುತ್ತಿದೆ ಯಾವುದೇ ರೀತಿಯಲ್ಲಿ ಮಹಾಜನ್ ವರದಿಯನ್ನು ಕೈಬಿಟ್ಟು ಕೇಂದ್ರ ಸರ್ಕಾರ ಒಂದು ಸೂತ್ರವನ್ನು ಕಂಡು ಹಿಡಿಯುತಕ್ಕ ಪರಿಸ್ಥಿತಿ ಕಾಣುತ್ತಿದೆ. ನಾನು ಮತ್ತು ಶ್ರೀ ನಾಗಪ್ಪನವರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಸಭೆಯ ಎಲ್ಲ ಕಾರ್ಯಕಲಾಪಗಳನ್ನೂ ನಿಲ್ಲಿಸಿ ನಮ್ಮ ಸೂಚನೆಗೆ ಅವಕಾಶ ಮಾಡಿಕೊಡಬೇಕು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡು ತ್ತಿದ್ದೇನೆ. ಇಲ್ಲದೆ ಹೋದರೆ ನಾವು ಉಗ್ರವಾದ ಚಳುವಳಿಯನ್ನು ಸರ್ಕಾರದ ವಿರುದ್ಧ ಮುಖ್ಯ ಮಂತ್ರಿಗಳ ವಿರುದ್ಧ, ಅವರ ನೀತಿಯ ವಿರುದ್ಧ ಮಾಡಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನ ಕೊಡಬೇಕಾಗುತ್ತದೆ.

†ಶ್ರೀ ಎಂ. ನಾಗಪ್ಪ (ರಾಯಚೂರು).—ನಾನು ಒಂದು ನಿಲುವಳಿ ಸೂಚನೆಯನ್ನ ಕೊಟ್ಟಿದ್ದೆ. ಅದನ್ನು ಜೀರೋ ರೂಪವಾಗಿ ತನ್ನಿ ಎಂದು ಮಾನ್ಯ ಅಧ್ಯಕ್ಷರು ಹೇಳಿದರು. ರೂಲ್ 312 ರ ಪ್ರಕಾರ ಒಂದು ಸೂಚನೆಯನ್ನು ಬರೆದು ಕೊಟ್ಟಿದ್ದೇನೆ.

ಪತ್ರಿಕೆಗಳಲ್ಲಿ ಕೆಲವು ವರದಿಗಳು ಬಂದಿವೆ ವಿರೋಧ ಪಕ್ಷದ ನಾಯಕರನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳೂ ಅವರೂ ಮಾತನಾಡಿದರು, ಅದರಲ್ಲಿ ಮಂತ್ರಿಮಂಡಲದ ಒಬ್ಬ ಮಂತ್ರಿಗಳು ಈಗ ಇದ್ದ ಸ್ಥಿತಿಯಲ್ಲೇಯೇ ಇರಲಿ ಎನ್ನುವ ಮಾತು ಹೇಳಿದರು ಎಂದು ವರದಿಯಾಗಿದೆ. ಆ ವರದಿಯನ್ನು ಸರ್ಕಾರದವರಿಂದ ಈಗಲೇ ನಿರಾಕರಿಸಿಲ್ಲ, ಯಾವ ವಿರೋಧ ಪಕ್ಷದವರು ಕೇರಿದ್ದರೋ, ನಮ್ಮ ಪಕ್ಷದವರು ಅದರಲ್ಲಿ ಕೇರಿರಲಿಲ್ಲ—ಯಾವಾಗಲಾದರೂ ಅವನ್ನು ನಿರಾಕರಿಸಬಹುದಾಗಿತ್ತು. ಮೈಸೂರು ರಾಜ್ಯದ ಗತಿ ಈಗ ಇರುವಂತೆಯೇ ಇರಲಿ ಎನ್ನುವ ವಿಚಾರವನ್ನು ನೋಡಿ ಬಹಳ ಕಳವಳಕ್ಕೆ ಈಡಾಗಿದ್ದಾರೆ. ಈ ಮಾನ್ಯ ಸಭೆ ನಿಲ್ಲ

ಏನೂ ಹೇಳಿಕೆ ಬರವೇ ಇರುವುದರಿಂದ ಮಹಾಜನ್ ವರದಿಯನ್ನು ಮುಖ್ಯಮಂತ್ರಿಗಳು ಕೈ ಬಿಡುತ್ತಾರೆಯೋ ಏನೋ ಎನ್ನುವ ಕಳವಳ ಜನರಲ್ಲಿ ಮೂಡಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ನನ್ನದೊಂದು ಕ್ರಿಯಾಲೋಪವಿದೆ. ಸಭೆಯು ಮುಂದೆ ಇರುವ ವಿಷಯವೇನು, ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಆದೇಶ ಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್ ಅವರೂ, ಮಾನ್ಯ ನಾಗಪ್ಪನವರೂ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು. ಅದನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ಈ ಮಾನ್ಯ ಸಭೆಯಲ್ಲಿ ಮೊದಲನೆಯ ನಲ ಒಂದು ನಿರ್ಣಯವಾದ ನಂತರ, ನಾವೆಲ್ಲರೂ ಕಾಂಗ್ರೆಸ್ (ಆರ್) ಕೂಡಿ ವಿರೋಧ ಪಕ್ಷದ ಎಲ್ಲ ಸದಸ್ಯರೂ ಕೂಡಿ ಈ ಸಭೆಯಲ್ಲಿ ಮುಖ್ಯಮಂತ್ರಿಯವರನ್ನು ಭೇಡಿಕೊಂಡೆವು, ನಿಮ್ಮ ನಾಯಕತ್ವದಲ್ಲಿ ಎಲ್ಲ ಪಕ್ಷಗಳ ಪ್ರಾತಿನಿಧ್ಯವಿರುವ ಒಂದು ನಿಯೋಗ ಡೆಲ್ಲಿಗೆ ಹೋಗಬೇಕು ಎಂದು, ಅದಕ್ಕೆ ಅವರು ಒಪ್ಪಲಿಲ್ಲ. ಕೇಂದ್ರ ಸರ್ಕಾರದಿಂದ ತಮಗೆ ಲಿಖಿತ ಮೂಲಕವಾಗಿ ಯಾವ ಪ್ರಪೋಸರ್ಸ್ ಕೂಡ ಬಂದಿಲ್ಲ, ಆ ರೀತಿ ಬರುವವರೆಗೂ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ನಾವು ಅವರ ವಚನವನ್ನು ಅವರು ಹೇಳಿದ ಮಾತನ್ನು ನಂಬಿಕೊಂಡು ಈ ಸಭೆಯ ಸದಸ್ಯರನ್ನೊಳಗೊಂಡಂಥ ಬೇರೆ ಬೇರೆ ಡೆಲಿಗೇಷನ್ ಕಳುಹಿಸಿದ್ದಾಯಿತು. ಈ ಹೊತ್ತು ಬೇರೆ ತತ್ಪಯಗಳ ಮೇಲೆ ಕೇಂದ್ರ ಸರ್ಕಾರದವರು ಗಡಿ ವಿವಾದದ ಬಗ್ಗೆ ನಿರ್ಧಾರ ಮಾಡುತ್ತಾರೆಂದು ಖಚಿತವಾಗಿ ನಮ್ಮ ಸರ್ಕಾರಕ್ಕೆ ಏನಾದರೂ ತಿಳಿದು ಬಂದಿದೆಯೇ ? ಬಂದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ನಮ್ಮ ಎದುರಿಗೆ ಇಡಬೇಕು. ಅಂಥ ವಿಷಯಗಳನ್ನು ಸಭೆಯು ಮುಂದೆ ಇಡದೆ, ಚರ್ಚೆಯಾಡದೆ, ಸ್ವತಃ ಅವರೇ ಒಂದು ಡೆಲಿಗೇಷನ್ ತಗೆದುಕೊಂಡು ಹೋಗಿ ನಿರ್ಣಯ ಮಾಡಬೇಕು ಎಂಬ ವಿಚಾರ ಸರ್ಕಾರಕ್ಕೆ ಇದೆಯೇ ! ಅಥವಾ ಆ ವಿಷಯವನ್ನು ಸಭೆಯ ಮುಂದೆ ತಂದು, ಸಭೆಯಲ್ಲಿ ಚರ್ಚೆಯಾಗಿ, ಒಂದು ಡೆಲಿಗೇಷನ್ ಡೆಲ್ಲಿಗೆ ತೆಗೆದುಕೊಂಡು ಹೋಗುತ್ತಾರೆಯೇ ! ಮುಂದಿನ ತಿಂಗಳು ಒಂದು ಡೆಲಿಗೇಷನ್ ಹೋಗುತ್ತಾರೆ ಎನ್ನುವ ಮಾತಿನಿಂದ ಜನತೆಯನ್ನು ಬಹಳ ಕಳವಳಕ್ಕೆ ಈಡು ಮಾಡುತ್ತಾರೆಂದು ಹೇಳುತ್ತೇನೆ.

ಈ ದಿವಸ ಪ್ರಪೋಸರ್ ಯಾವುದಾದರೂ ಬಂದಿದ್ದರೆ ಈ ಸಭೆಯ ಮುಂದೆ ಚರ್ಚೆಗೆ ಅದನ್ನಿಟ್ಟು ಒಂದು ನಿರ್ಣಯಮಾಡಬೇಕು. ಈ ಸಭೆಯ ಖಚಿತ ಅಭಿಪ್ರಾಯ ಮಹಾಜನ್ ವರದಿಯನ್ನು ಒಪ್ಪಬೇಕೆಂಬುದು. ಅದರಲ್ಲಿ ಸಂದೇಹವಿಲ್ಲ. ಇತರೆ ಯಾವುದಾದರೂ ಪ್ರಪೋಸರ್‌ಗೆ ಸರಕಾರದವರು ಒಪ್ಪಿದ್ದರೆ ಮಾನ್ಯ ಮಂತ್ರಿಗಳು ಈ ಸಭೆಯ ತೀರ್ಮಾನವನ್ನು ಉಲ್ಲಂಘಿಸಿದಂತಾಗುವುದು ಎಂದು ಭಾವಿಸುತ್ತೇನೆ. ಆದುದರಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಡಬೇಕು. ಪತ್ರಿಕೆಯಲ್ಲೇನೇನೋ ವರದಿ ಬರುತ್ತಿದೆ. ಇರುವ ಅನುಮಾನವನ್ನು ಹೋಗಲಾಡಿಸುವುದಕ್ಕೆ ನಿಷ್ಪತ್ತಿವಾಗಿ ಇರುವ ವಿಚಾರವನ್ನು ಹೇಳಬೇಕು. ಈ ಬಗ್ಗೆ ರಾಜ್ಯ ಸರಕಾರದವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗ ತಾವು ಕೊಟ್ಟಿರುವ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ, ಅದು ನಿಲುವಳಿ ಸೂಚನೆಯಾಗುವುದಿಲ್ಲ, ಈ ವಿಷಯದಲ್ಲಿ ಹಿಂದೆ ಈ ಸಭೆಯಲ್ಲಿ ನಿಷ್ಪತ್ತಿವಾಗಿ ನಿರ್ಣಯಮಾಡಿದ್ದೇವೆ. ಈಗೇನಾದರೂ ಹೊಸ ಪ್ರಪೋಸರ್ ಬಂದಿರುವ ವಿಚಾರ ಈ ಸಭೆಯ ಮುಂದೆ ಬಂದಿಲ್ಲ.

Sri B. P. GANGADHAR.—You may kindly read Rule 50. It reads thus :

> "Subject to the provisions of these rules, a motion for an adjournment of the business of the Assembly for the purpose of discussing a definite matter of urgent public importance may be made with the consent of the Speaker."

Therefore it is a matter of urgent public importance. Now what we discussed previously was of a different type altogether. There

(SRI B. P. GANGADHAR)

are 3 proposals that have been put forward by the Central Government, and they have not been placed before this House. This is a matter of urgent puplic importance. All the ingredients are there. When all the ingredients are there, you are bound to give your consent.

Mr. DEPUTY SPEAKER.—I have already refused to give my consent.

ಶ್ರೀ ಬಿ. ಪಿ. ಗಂಗಾಧರ್.—ಬೇಕಾದರೆ ಒಂದು ದಿವಸ ಕುಳಿತು ಬಿಲ್ಲುಗಳನ್ನು ಪಾಸ್ ಮಾಡೋಣ. ದೇಶದ ಮತ್ತು ಜನರ ಪ್ರಶ್ನೆ ಇದು, ನೂರಾರು ಹಳ್ಳಿಗಳು ಹೋಗುವ ಪ್ರಶ್ನೆ, ಈ ಸಂಬಂಧವಾದ ವಿಷಯಕ್ಕೆ 3-4 ದಿವಸಗಳಂದ ಒಪ್ಪಿಗೆ ಕೊಡದಿರುವುದು ಸರಿಯಲ್ಲ. ಯಾವಾಗ ಅವಕಾಶ ಕೊಡುವುದು ? ನಾಳೆ ಅಥವ ಇಂದು ಚರ್ಚೆಗೆ ತೆಗೆದುಕೊಳ್ಳುವುದಾದರೆ ಪರವಾಗಿಲ್ಲ, ನಾವು ತಯಾರಿದ್ದೇವೆ. ಈ ಬಗ್ಗೆ ಏನು ಭರವಸೆ ಕೊಡುತ್ತೀರಿ ! ಅವಕಾಶವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಕಳಿಸಿರುವ ಸೂಚನೆ ಅತಿ ಜರೂರು ಮತ್ತು ಪ್ರಾಮುಖ್ಯವಾದುದು.

Mr. DEPUTY SPEAKER.—I know this is a very important matter.

ಶ್ರೀ ಬಿ. ಪಿ. ಗಂಗಾಧರ್.—ಈ ವಿಚಾರದಲ್ಲಿ ನಾವು ಜಾಗ್ರತೆ ಒಂದು ತೀರ್ಮಾನಕ್ಕೆ ಬಾರದಿದ್ದರೆ ಜನರು ನಮ್ಮ ಬಗ್ಗೆ ಏನು ಹೇಳುವರು ? ಇದಕ್ಕೆ ಅವಕಾಶ ಕೊಟ್ಟೇಕೊಡಬೇಕು.

ಉಪಾಧ್ಯಕ್ಷರು.—ಅವಕಾಶ ಕೊಡುವುದಕಾಗುವುದಿಲ್ಲ ಎಂದು ಹೇಳಿದ್ದೇನೆ. ಆಲ್ಟರ್ನೇಟಿವ್ ಪ್ರಪೋಸಲ್ಸ್ ಏನಾದರೂ ಇದೆಯೇ ಎಂಬುದನ್ನು ಮುಖ್ಯ ಮಂತ್ರಿಗಳು ಹೇಳಲಿ.

ಶ್ರೀ ಬಿ. ಪಿ. ಗಂಗಾಧರ್.—ಅವಕಾಶ ಕೊಡಬೇಬೇಕು, ಇಲ್ಲವಾದ್ದರೆ ವಾಕೌಟ್ ಮಾಡುತ್ತೇವೆ. ಆರ್ಬಿಟ್ರೆರಿಯಾಗಿ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಮುಖ್ಯವಾದ ವಿಚಾರ, ಅತಿ ಮುಖ್ಯವಾದುದು, ಯಾವ ಕಾರಣದಿಂದ ತಳ್ಳಿಹಾಕ ತ್ತೀರಿ ಇವತ್ತ ಅವಕಾಶ ಕೊಡಬೇಕು, ಮಹಾರಾಷ್ಟ್ರದವರು ಒತ್ತಾಯಮಾಡುತ್ತಿದ್ದಾರೆ, ನೀವು ನುಮ್ಮನಿದ್ದೀರಿ. ಇಷ್ಟು ಅತಿ ಮುಖ್ಯವಾದ ವಿಚಾರವನ್ನು ತಳ್ಳಿ ಹಾಕುವುದು ಸರಿಯಾದ ನೀತಿಯಲ್ಲ.

ಶ್ರೀ ಎಲ್. ಶಿವಕಂಠಯ್ಯ.—ಬಲತ್ಕಾರಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಲೇಬೇಕು ಎಂದು ಹೇಳುವುದಕ್ಕೆ ಯಾರಿಗೂ ಹಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನನಗೆ ಗೊತ್ತಿದೆ. ಅಧ್ಯಕ್ಷರಿಗೆ ಗೌರವ ಕೊಟ್ಟಿರುವುದರಿಂದಲೇ ಉದ್ದೇಶ ನನಗಿಲ್ಲ ನೀವು ನಿಮ್ಮ ಮಾಡುತ್ತಿದ್ದೀರಿ.

ಉಪಾಧ್ಯಕ್ಷರು.—ಈಗ ಅವಕಾಶ ಕೊಡುವುದಿಲ್ಲ, ಕೊಡಲು ಸಾಧ್ಯವಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ನಮ್ಮ ಪ್ರೋಗ್ರಾಂ ಸ್ಕಾರ ಅಸೆಂಬ್ಲಿ ಮುಗಿಯುತ್ತಾ ಇದೆ, ಇದು ಮುಖ್ಯವಾದ ವಿಚಾರ, ಇದನ್ನು ಬಿಟ್ಟು ಬಲ್ಲಾ ತೆಗೆದುಕೊಳ್ಳುತ್ತಿದ್ದೀರಿ. This is a most important matter which requires your immediate consent.

ಉಪಾಧ್ಯಕ್ಷರು.—ಇದು ಬಹಳ ಮುಖ್ಯವಾದ ವಿಚಾರ, ಚರ್ಚೆಮಾಡುವುದು ಉಚಿತ. ಆದರೆ ಈಗಲ್ಲ. ಮುಖ್ಯ ಮಂತ್ರಿಗಳು ನಾಳೆ ಬರುತ್ತಾರೆ, ಅವರನ್ನು ಕೇಳಿ ಪೂರ್ತಿ ದಿವಸ ಚರ್ಚೆಮಾಡಲು ಯೋಚನೆಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ಅವರು ರಾಜೀನಾಮೆ ಕೊಡಲಿ, ರಾಜ್ಯ ಸರ್ಕಾರ ನಿವೆ ಮಾಡುತ್ತಾ ಕೂತಿದೆ. ನಾನು ಗಂಭೀರವಾಗಿ ಪ್ರಾರ್ಥನೆ ಮಾಡುವುದಿಷ್ಟೆ : ನಾನು ತೊಂದರೆ ಕೊಡಬೇಕೆಂದಿಲ್ಲ, ನಾನೂ ನಾಗಪ್ಪನವರು ನಿಲುವಳಿಸೂಚನೆ ಕಳಿಸಿದ್ದೆವು, ಅದನ್ನು ತೆಗೆದುಕೊಳ್ಳಬೇಕೆಂದರೆ ಆಗುವುದಿಲ್ಲವೆಂದು ಹೇಳಿತ್ತೀರಿ. ಮೊದಲೇ ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೆ ಇಷ್ಟು ಗಲಾಟೆಯಾಗುತ್ತಿರಲಿಲ್ಲ. ಇದಕಿಂತ ಪ್ರಾಮುಖ್ಯವಾಗಿರುವುದು ಯಾವುದಿದೆ ! ಇಷ್ಟರಲ್ಲೇ ಕೇಂದ್ರ ಸರಕಾರ ಒಂದು ತೀರ್ಮಾನ ಕೈಗೊಳ್ಳುವುದು. ನಮ್ಮ ಸರಕಾರದ ನಿಲುವೇನು ? ಬರೀ ಹೊಗಳಿಕೆ, ಡೆಲಿಗೇಷನ್ನೇ ಅಥವಾ ರಾಜೀನಾಮೆಯೆ ! ನಿಮ್ಮ ರೀತಿ ಸರಿಯಲ್ಲ, ಅಕ್ಷಮ

ಉಪಾಧ್ಯಕ್ಷರು.—ನಿಲುವಳಿ ಸೂಚನೆ ತೆಗೆದುಕೊಂಡು ಚರ್ಚೆಮಾಡುವುದು ಸರಿಯಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ, ಇದರ ಮೇಲೆ ಪೂರ್ಣ ಚರ್ಚೆಯಾಗಬೇಕು, ಅದಕ್ಕೋಸರ ಇದನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆ ಮಾಡುವುದು ಬೇಡ ಎಂದು ನಾನು ಹೇಳುವುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಚಿವರು ನಾಳೆ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುವುದಾದರೆ ಗಂಭೀರವಾಗಿ ಕುಳಿತುಕೊಳ್ಳುತ್ತೇವೆ. ಜವಾಬ್ದಾರಿ ತೆಗೆದುಕೊಂಡು ಅವಕಾಶ ಕೊಡಿಸಿ.

ಉಪಾಧ್ಯಕ್ಷರು.—ಮಂತ್ರಿಗಳನ್ನು ಕೇಳಿ ಇದರ ಚರ್ಚೆಗೆ ಅವಕಾಶಮಾಡುತ್ತೇನೆಂದು ಹೇಳಿದೆ, ಚರ್ಚೆ ಮಾಡಬಾರದೆಂಬ ಉದ್ದೇಶವಿಲ್ಲ.

4-30 P.M.

ಶ್ರೀ ವಾಟಾಳ್ ನಾಗರಾಜ್.—ನನ್ನ ಸೂಚನೆಯನ್ನು ರೂಲ್ಸ್ ಪ್ರಕಾರ ಕಳುಹಿಸಿಲ್ಲವೇ, ನಿಯಮಿತ ವೇಳೆಯಲ್ಲಿ ಕಳುಹಿಸಿಲ್ಲವೇ? ಯಾವ ರೂಲ್ ಪ್ರಕಾರ ಸರಿಯಲ್ಲ ಎಂದು ಹೇಳುತ್ತಾ ಇದ್ದೀರಿ? ನಾಳೆ ಇದಕ್ಕೆ ಅವಕಾಶ ಮಾಡಿಕೊಟ್ಟು, ಚರ್ಚೆಗೆ ತೆಗೆದುಕೊಳ್ಳುವುದಾದರೆ ಅಭ್ಯಂತರವಿಲ್ಲ.

ಉಪಾಧ್ಯಕ್ಷರು.—ಪ್ರತಿಯೊಬ್ಬರ ಅಭಿಪ್ರಾಯದಂತೆ ಸಭೆ ನಡೆಸುವುದು ಬಹಳ ಕಷ್ಟ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ವಿಚಾರ ಆದ್ದರಿಂದ ನಾನು ಒತ್ತಾಯ ಮಾಡುತ್ತಾ ಇದ್ದೇನೆ.

Sri D. B. KALMANKAR.—Sir, it is a very important matter. The Central Government is likely to take a decision in the matter before 13th of next month. Let us reiterate our stand at the earliest opportunity. Let the Hon. Minister assure this House, that this matter will be taken up tomorrow.

ಉಪಾಧ್ಯಕ್ಷರು.—ಈಗಾಗಲೇ ಅರ್ಧ ಗಂಟೆ ಆಯಿತು.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಪ್ರಾಮುಖ್ಯವಾದ ವಿಚಾರ ಯಾವುದು ಇದೆ. ಯಾವ ಬಿಲ್ಲು ಇದೆ ತೋರಿಸಿ, ನ್ಯಾಯವಿ?

ಉಪಾಧ್ಯಕ್ಷರು.—ನಾನು ಹೇಳಿದ್ದು ಮುಖ್ಯಮಂತ್ರಿಗಳನ್ನು ಕೇಳೋಣ. ಇದನ್ನು ಚರ್ಚೆ ಮಾಡಬೇಕಾದರೆ ಇದಕ್ಕೆ ಬೇರೆ ಮಾರ್ಗವಿದೆ. ಇದು ಇಲ್ಲಿಗೆ ಮುಗಿಯಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇಷ್ಟು ಸುಲಭವಾಗಿ ತಿರುವಿಕಾಕಬೇಡಿ, ಮಾನ್ಯ ಮಂತ್ರಿಗಳು ಆಷ್ಯೂರನ್ಸ್ ಕೊಡಲಿ, ಇದು ಅತಿ ಮುಖ್ಯವಾಗಿರತಕ್ಕ ವಿಚಾರ, ಎಲ್ಲರಿಗೂ ಬೇಕಾಗಿರತಕ್ಕದ್ದು.

ಶ್ರೀ ಎಲ್. ಶ್ರೀಕಂಠಯ್ಯ.—ಮಹಾಜನ್ ಕಮಿಷನ್ ವರದಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಎಷ್ಟು ಕಾತುರತೆ ಇದೆಯೋ ಅಷ್ಟೆ ಎಲ್ಲರಿಗೂ ಇದೆ. ಇವನ್ನು ತೆಗೆದುಕೊಳ್ಳಬೇಕೆಂಬುದು ಈ ಮಾತಿಗೆ ಬಿತ್ತಿರತಕ್ಕ ವಿಷಯ. ಇಷ್ಟು ಹೇಳಿ ಮುಂದಿನ ಕೆಲಸಕ್ಕೆ ಹೋಗೋಣ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮಿಂದ ಈ ಬಗ್ಗೆ ಒಂದು ಆಷ್ಯೂರೆನ್ಸ್ ಬರಬೇಕು.

ಉಪಾಧ್ಯಕ್ಷರು.—ಇವತ್ತು ಈ ಸಭೆಯಲ್ಲಿ ಏನು ಫೀಲಿಂಗ್ಸ್ ಇದೆ ಎಂಬುದನ್ನು ತಿಳಿಸಿ ಚೀಫ್ ಮಿನಿಸ್ಟರವರ ಹತ್ತಿರ ಮಾತನಾಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಪಾರ್ಲಿಮೆಂಟರಿ ಮಿನಿಸ್ಟರು ಇದ್ದಾರಲ್ಲಾ, ಅವರು ಉತ್ತರ ಕೊಡಬಹುದು.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಇವತ್ತು ಮಹಾಜನ್ ಕಮಿಷನ್ ವರದಿ ವಿಷಯವಾಗಲಿ, ಮೈಸೂರಿಗೆ ಸಂಬಂಧಪಟ್ಟ ಗಡಿ ಸಮಸ್ಯೆಯ ವಿಷಯವಾಗಲಿ, ಮಾನ್ಯ ಸದಸ್ಯರಿಗೆ ಎಷ್ಟು ಕಾತುರತೆ ಇದೆಯೋ ಅದಕ್ಕಿಂತಲೂ ತೀವ್ರವಾದ ಕಾತುರತೆ ನಮ್ಮ ಮುಖ್ಯಮಂತ್ರಿಗಳಿಗೆ ಇದೆ ಮತ್ತು ಈ ಕಡೆ ಇರತಕ್ಕವರಿಗೂ ಕೂಡ ಇದೆ ಎಂಬುದನ್ನು ನಾನು ಈ ಕಡೆಯಿಂದ ಸ್ಪಷ್ಟಪಡಿಸುತ್ತಾ ಇದ್ದೇನೆ. ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು

(ಶ್ರೀ ಬಿ. ರಾಚಯ್ಯ)

ತರಾವು ಈಗಾಗಲೇ ಆಗಿದೆ. ಆದ್ದರಿಂದ ಕಾನೂನು ಪ್ರಕಾರ ಇದನ್ನು ನಿಲುವಳಿ ಸೂಚನೆಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ ಇಲ್ಲವೇ ಎಂಬುದನ್ನು ತಾವು ನಿರ್ಧರಿಸಬೇಕು ; ಒಂದು ವೇಳೆ ಆಗವಿದ್ದರೂ ಸಹ 312ರ ರೂಲ್ ಪ್ರಕಾರ ಏನು ಪರಿಸ್ಥಿತಿ ಇದೆ ಎಂಬುದನ್ನು ನಾವು ಈ ಸಭೆಯ ಮುಂದೆ ಇಡುವುದಕ್ಕೆ ಒಂದು ಅವಕಾಶವನ್ನು ಈ ಸಭೆ ಮುಗಿಯುವುದರೊಳಗೆ ತೆಗೆದು ಕೊಳ್ಳುತ್ತೇವೆ. ಆದ್ದರಿಂದ ಒಂದು ಸಾರಿ ಈಗಾಗಲೇ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ, ಪದೇ ಪದೇ ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ವಿಷಯ ಬೆಳೆಹರಿದಹಾಗೆ ಆಗುವುದಿಲ್ಲ. ಇವತ್ತು ಇರತಕ್ಕ ಈ ಪ್ರಶ್ನೆ ಏನಾಗುತ್ತದೆಯೋ ಎಂಬ ಶಂಕೆ ಎಲ್ಲರಿಗೂ ಇದೆ; ಆದ್ದರಿಂದ ಒಂದು ಒಳ್ಳೆಯ ವಾತಾವರಣದಲ್ಲಿ ವಿಚಾರಗಳನ್ನು ತಿಳಿದುಕೊಂಡು ನಾವೇನು ಕಾರ್ಯ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಈ ಸಭೆ ಮುಗಿಯುವುದರೊಳಗೆ ಎಂದರೆ ಈ ಅಧಿವೇಶನ ಮುಗಿಯುವುದರೊಳಗೆ ಈ ಚರ್ಚೆಗೆ ಅವಕಾಶ ಮಾಡಿಕೊಡಬಹುದು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಸದಸ್ಯರು ಇಂದಿನ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

*

Police arrangements around the Maharani's College General Hostel etc.

† Sri AZEEZ SAIT.—Sir, I have to make one submission about the difficulties experienced by the members of the legislature who are residing in the General Hostel. Police has been posted from the Mysore Bank Circle to the Maharani College Circle with the result that it is very difficult for the members to go to their rooms in the General Hostel. This is the case since yesterday. I tried to contact the Commissioner of Police but he was not avilable. I tried to contact the Speaker but he was also not available. I, however contacted the Secretary but I do not know what action is being taken. This difficulty is experienced not only by the members of the legislature residing in the General Hostel but also the students residing in the Medical College Hostel. Neither the Speaker nor the Deputy Speaker has visited the place.

Mr. DEPUTY SPEAKER.—I will look into it and take suitable action.

Alleged manhandling of a M.P.

Sri D. B. KALMANKAR.—Under Rule 312 I have given notice of a motion regarding the manhandling of a Member of Parliament while he was entering the House.

Mr. DEPUTY SPEAKER.—That will be taken up tomorrow.

Sri K. H. PATIL.—Myself and other 25 members have given notice under rule 312 and I expected your consent yesterday. Unfortunately the consen has not been given to me. Today also I expected that the consent would be given.

Mr. DEPUTY SPEAKER.—I have not looked into it. It will definitely be taken up tomorrow or on Monday.

Calling Attention to a matter of urgent Public Importance

re. Purchase of Electric Motors, etc., by ryots through the Banks

Sri B. GANGANNA (Kallambella).—Sir, I call the attention of the Chief Minister to the m tter of inconveniences caused to the ryots who go in for loans to purchase electric motor sets on loan through the Bank of Mysore all over the State.

Sri D. PARAMESWARAPPA (Deputy Minister for Major Irrigation and Electricity).—The loans for purchase of pumpsets by the intending consumers are at present being given by the banks. In order to ensure that the loans are not given to the consumers to whom it will not be possible for the Electricity Board to give power supply on account of the wells being located very far away from the existing distribution lines and consequently being uneconomical, the Board has stipulated that the intending consumers should first obtain a feasibility certificate from the local officer of the Mysore State Electricity Board. On receipt of an application by the consumer, the Electricity Board prepares an estimate and determines whether the line can be extended within the ceiling limit of Rs. 1,250 per H. P. fixed by the Board. If a large number of consumers come up in an area, group estimates are prepared keeping the above ceiling limit in view. If it is found that it is feasible to extend the distribution line and give power supply to consumer, a feasibility certificate is given to the consumer indicating that the power supply will be given within six months of the date of his submission of completion report for having installed the pump and completed the wiring etc. If the applicant is one among the several consumers for whom a group estimate is prepared, the feasibility certificate is issued with the condition that power supply will be given to him within six months subject to the condition that at least 50 per cent of the applicants for whom the estimate has been prepared, instal pumpsets, complete wiring and submit completion reports to the Board. On receipt of feasibility certificate, the consumer has to approach the Bank and obtain the loan, purchase the pumpset and instal the same and submit the completion report to the Board.

While it is the intention of the Board to service the pumpsets of the consumers within a reasonable time after the receipt of the completion report, there are so many uncertain factors such as, non-availability of essential materials and as much, connections to the consumer are given in the order of priority on receipt of completion reports from consumers for whom power supply has already been sanctioned. It is also made clear by the Board that the power supply sanctioned by it is

(SRI D. PARAMESWARAPPA)

valid for a period of six months, since it is found that in actual practice a number of consumers after having obtained the feasibility certificates or power sanction, do not pursue the matter and give up their intention of taking power supply to the pumpsets. If the consumer does not submit the completion report within six months, the power supply sanctioned lapses and he has to once again apply to the Board and obtain power supply sanction as though he is a fresh applicant.

The Bank of Mysore has reported that though feasibility certificate is issued by the Board, the bank has come across instances where they have not been able to give power supply for a long time for want of materials. This has resulted in the misuse of funds for pumpsets in some cases. To avoid such misuse, the bank has issued instructions to its branch managers to contact the local officials of the Board and get their oral confirmation with regard to the probable time by which the power would be made available. On ascertaining this, the amount will be released by the bank to the suppliers of pumpsets 10/15 days before the date of power supply so that the farmers can instal them and arrange of the completion report to the Electricity Board. The bank has also reported that there have been no complaints as yet that the procedure followed by it has resulted in any hardship to the farmers concerned. If any specific instances are brought to its notice, the bank is prepared to issue revised instructions to release the loans meant for pumpsets 3-4 weeks in advance of the date for energisation of the pumpsets indicated by the Mysore State Electricity Board. This is considered, by the bank as a suitable period it can stipulate to safeguard its interest without in anyway inconveniencing the farmers.

ಶ್ರೀ ಬಿ. ಗಂಗಣ್ಣ.—ಇದರಲ್ಲಿ ಮೂಲೋದ್ದೇಶ ಇಷ್ಟೇ. ಮೈಸೂರು ಬ್ಯಾಂಕಿನವರು ಮಾತ್ರ ಇಂತಹ ವ್ಯತ್ಯಾಸಮಾಡಬೇಕು. ರಾಷ್ಟ್ರೀಕರಣ ಮಾಡಿದ ಇತರ ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ಆ ರೀತಿ ಇಲ್ಲ. ಎಲ್ಲಾ ಬ್ಯಾಂಕುಗಳು ಒಂದೇ ರೀತಿ ರೂಲ್ಸ್ ಅನ್ವಯ ನಡೆಯಬೇಕೆಂದು ಹೇಳುವಾಗ ಮೈಸೂರು ಬ್ಯಾಂಕ್ ಏಕೆ ಈ ರೀತಿ ಡಿಸ್‌ಪ್ಯಾರಿಟಿ ಮಾಡಬೇಕು ? ಎಲೆಕ್ಟ್ರಿಸಿಟಿ ಬೋರ್ಡಿನವರು ಸರ್ವಿಸ್ ಕೊಡಬೇಕೆಂದರೆ Installation of motors and other things must be completed. ಇನ್‌ಸ್ಪೆಕ್ಷನ್ ಪೂರ್ತಿಯಾಗಿ ಕಂಪ್ಲೀಷನ್ ರಿಪೋರ್ಟ್ ಕೊಡುವವರಿಗೆ ಸರ್ವಿಸ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. This is an embarrassing position to the raiyat. The Minister I think has not perfectly understood this. I hope the Chair will direct him to set right these things with the Department and also with the Bank.

ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ನಾವು ಮೈಸೂರು ಬ್ಯಾಂಕಿನವರೊಡನೆ ಪತ್ರ ವ್ಯವಹಾರ ಮಾಡಿದಮೇರೆ ಅವರು ಕೆಲವು ಕೇಸುಗಳಲ್ಲಿ ಕೊಟ್ಟಂಥ ಹಣ ದುರುಪಯೋಗವಾಗಿದೆಯೆಂದು ವರದಿ ಕಳುಹಿಸಿದ್ದಾರೆ. ಅಂದಮೇಲೆ ಫೀಜಿಬಲಿಟಿ ಸರ್ಟಿಫಿಕೇಟ್ ಕೊಟ್ಟಮೇಲೆ ಅವರು ಲೋನನ್ನು ಇಶ್ಯೂ ಮಾಡುವುದು, ಆಮೇಲೆ ಅಡ್ವಿಸಿಬರ್ ಎಂದು ಮನವರಿಕೆ ಮಾಡಿದ್ದಾರೆ.

ಶ್ರೀ ಬಿ. ಗಂಗಣ್ಣ.—ಫೀಜಿಬಲಿಟಿ ಸರ್ಟಿಫಿಕೇಟ್ ಕೊಡುವುದು ಸರಿ. ಈಗ ಒಂದು ಸ್ಪೆಸಿಫಿಕ್ ಕೇಸ್ ಕೊಡಿ ಎಂದು ಹೇಳುತ್ತೀರಿ. ನನ್ನ ಕ್ಷೇತ್ರದಲ್ಲಿ ಕೊಪಸಕೆರೆ ಗ್ರಾಮದಲ್ಲಿ ಒಬ್ಬ ಸಾಲಕ ರಿಗೆ ಅಪ್ಲೈ ಮಾಡಿ ಕಂಪ್ಲೀಷನ್ ರಿಪೋರ್ಟ್ ಕೊಡುವುದಕ್ಕೆ ಅರೇಂಜ್ ಮಾಡಿ ನನ್ನನ್ನು

ಆ ಬ್ಯಾಂಕಿನ ಮ್ಯಾನೇಜರ್ ಹತ್ತಿರ ಕರೆದುಕೊಂಡು ಹೋದರು. ಆಗ ಅವರು We have received a circular from the State Government of Mysore. ಸರ್ವಿಸ್ ಕೊಡದಿದ್ದರೆ ಹಣ ಕೊಡಬೇಡಿ ಎಂದು ಹೇಳುತ್ತಿದ್ದಾರೆ. ಇದರಿಂದ ಬಡ ಜನಗಳಿಗೆ ಬಹಳ ಅನ್ಯಾಯವಾಗುತ್ತಿದೆ. ಎಂ. ಎಸ್. ಇ. ಬಿ. ಯವರು ಬೇಗ ಬೇಗನೇ ಸರ್ವಿಸ್ ಕೊಡುವುದಕ್ಕೆ ಪ್ರಯತ್ನಮಾಡುತ್ತಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.— ಮಾನ್ಯ ಸದಸ್ಯರಿಗೆ ಒಂದು ಭರವಸೆಯನ್ನು ಕೊಡುತ್ತೇನೆ. ಈಗ ಎಸ್ಟಿಮೇಟ್ 1,250 ರೂಪಾಯಿಗಳೆಂದು ಒಂದು ಸೀಲಿಂಗ್ ಲಿಮಿಟ್ ಮಾಡಿಕೊಂಡಿದ್ದಾರೆ. ಕಂಪ್ಲೀಷನ್ ರಿಪೋರ್ಟ್ ಕೊಟ್ಟನಂತರ, ಪವರ್ ಸಪ್ಲೈ ಕೊಡದಿದ್ದರೆ ಅಂತಹ ಕೇಸುಗಳಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೆ ಎಕ್ಸೀಡ್ ಆದಾಗ್ಗೆ, ಸ್ವಲ್ಪ ಅನ್‌ಇಕನಾಮಿಕ್ ಆಗುತ್ತದೆ, ಅನ್‌ರಿಜನಬರ್ ಆಗುತ್ತದೆ. ಅದಕ್ಕೋಸ್ಕರ ಬೋರ್ಡಿನವರು ತೆಗೆದುಕೊಳ್ಳಲಿಲ್ಲ.

ಶ್ರೀ ಬಿ. ಗಂಗಣ್ಣ.— ಬೋರ್ಡಿನವರದು ತಪ್ಪು ಇಲ್ಲ, ಸರಿ. ಮೈಸೂರು ಬ್ಯಾಂಕಿನವರು ತಮ್ಮ ಪಾಲಿಸಿಯನ್ನು ಒಪ್ಪಿಕೊಳ್ಳದೆ ಇದ್ದರೆ, ಒಂದು ಬ್ಯಾಂಕಿನವರು ಒಪ್ಪಿಕೊಂಡು ಇನ್ನೊಂದು ಬ್ಯಾಂಕಿನವರು ಒಪ್ಪಿಕೊಳ್ಳದೇ ಇರಲು ಕಾರಣವೇನು ? ಅವರು ಒಪ್ಪದೇ ಇದ್ದರೆ ಈಗಿರತಕ್ಕ ಪಾಲಿಸಿಯನ್ನು ಮಾಡಿಫೈ ಮಾಡಿ ರೈತರಿಗೆ ಕೂಡಲೇ ಸಹಾಯ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.— ಇದರಲ್ಲಿ ಎಂ. ಎಸ್. ಇ. ಬಿ. ಅವರ ಅಪರಾಧ ಏನೂ ಇಲ್ಲ. I will see that as far a as possible the complaints are minimised.

Sri B. P. GANGADHAR.— Sir, there is a serious charge against the officers and officials of the Electricity Board. Even though estimates are prepared, and completion certificate is also produced, even though the materials were available in abundance still, they do not wish to give service in a particular case. I am also given to understand that they demanded money and they are demanding money both directly and indirectly. This is rampant in Tumkur District. Would you take suitable action to see that the Electricity Board officials are compelled to give service if the materials are there, and if the completion report is furnished ?

Sri D. PARAMESWARAPPA.—Some times it happens that even though completion report is submitted, the work is not taken up for want of materials.

In some cases, even though materials are ready, the work is not taken up with some ulterior motives, to extract money from the applicants. If any specific instances are brought to the notice of the Government certainly we will take action.

Sri B. P. GANGADHAR.—Is it not possible for the Government to issue a circular that if materials are available and completion report is forthcoming, the electricity board officials are bound to give service immediately and otherwise, disciplinary action will be taken against them ? Can you not issue a circular in these terms ?

Sri D. PARAMESWARAPPA.—We have constituted a vigilance squad in the Board to go into such questions. And if any specific instances are brought to the notice of the Government, certainly, I will consider what drastic action will have to be taken against the erring officials.

Sri D. B. KALMANKAR.—Sir, in view of the fact that these allegations are made by the hon. Members of this House, is it not sufficient that Government should take note of it and issue a circular as requested by my friend ? The circular as such does not do any harm to anydody. On the other hand, it will have a useful and salutary effect on the expeditious execution of the works and avoid such corrupt practices which are there in every district and in every taluk.

Sri D. PARAMESWARAPPA.—For the information of my friend, I would say we have constituted advisory committees at the district level and taluk level wherein the MLA and MLC of the place and MP are put in. If they are interested in any such cases, certainly, they are at liberty to take it up there.

Sri G. CHANDRAKANTH.—Sir, such things we are hearing for the first time. So far, we have not even received a notice of such meeting.

ಶ್ರೀ ಬಿ. ಪಿ. ಗಂಗಾಧರ್.—ನಮಗೆ ಒಂದು ನೋಟೀಸ್ ಕೂಡ ಬಂದಿಲ್ಲ. ನಮ್ಮನ್ನು ಒಂದು ದಿವಸವೂ ಕೂಡ ಮೀಟಿಂಗಿಗೆ ಕರೆದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಮಿಟಿ ಮೀಟಿಂಗುಗಳನ್ನು ಕರೆದರೂ ಕೂಡ ಒಂದು ಸಾರಿಯೂ ನನ್ನನ್ನು ಆ ಮೀಟಿಂಗಿಗೆ ಕರೆದಿಲ್ಲ. ಅಂದಮೇಲೆ ಪತಕ್ಕೋಸ್ಕರ ಅಂತಹ ಕಮಿಟಿ ಇರಬೇಕು ?

Mysore Excise (Second Amendment) Bill, 1970

(i) Statutory Resolution to disapprove Ordinance No. 4 of 19..

(ii) Motion to Consider the Bill.

Mr. DEPUTY SPEAKER.—Sir M. Nagappa may move his statutory resolution.

Sri M. NAGAPPA (Raichur).—Sri, I beg leave of the House to move this statutory resolution :

> "That this Assembly disapproves the Ordinance No. 4 of 1970, the Mysore Excise (Second Amendment) Ordinance 1970, issued by the Governor of Mysore on 7th August 1970."

Mr. DEPUTY SPEAKER.—Motion moved :

> "That this Assembly disapproves the Ordinance No. 4 of 1970, the Mysore Excise (Second Amendment) Ordinance, 1970 issued by the Governor on 7th August 1970."

The Hon. Minister for Excise to move the Bill.

Sri RAMAKRISHNA HEGDE (Minister for Finance, Planning and Youth Welfare).—Sir, I beg to move :

> "That the Mysore Excise (Second Amendment) Bill, 1970, be taken into consideration."